ಇ) ಸಧ್ಯದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಈ) ಇಲ್ಲ.

ಉ) (ಇ) ಅಂಶಕ್ಕೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಆರ್.ಡಿ.ಎಲ್ ಅನ್ನು ಪ್ರಾರಂಭಿಸುವುದು

4044 (4735) : ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಆರ್.ಡಿ.ಎಲ್. ಮಂಜೂರಾತಿಯಾಗಿದೆಯೇ?

ಆ) ಮಂಜೂರಾತಿಯಾಗಿದ್ದರೆ ಈ ಬಗೆಗಿನ ವಿವರಗಳೇನು?

ಇ) ಆರ್.ಡಿ.ಎಲ್.ನ ಅನುಷ್ಠಾನ ಕಾಮಗಾರಿ ಪ್ರಾರಂಭವಾಗಿದ್ದಲ್ಲಿ, ಈ ಕಾಮಗಾರಿಯು ಯಾವ ಹಂತದಲ್ಲಿದೆ? ಈ ಕಾಮಗಾರಿಗೆ ಇದುವರೆವಿಗೆ ವೆಚ್ಚವಾಗಿರುವ ಹಣವೆಷ್ಟು?

ಈ) ಆರ್.ಡಿ.ಎಲ್. ಯಾವಾಗ ಕಾರ್ಯಾರಂಭ ಮಾಡುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನಾವತಿಯಿಂದ ಮಂಡ್ಯ ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ಪ್ರಾದೇಶಿಕ ತಪಾಸಣಾ ಪ್ರಯೋಗಾಲಯದ ಕಟ್ಟಡದ ನಿರ್ಮಾಣಕ್ಕಾಗಿ ಸಿವಿಲ್ ಕಾಮಗಾರಿಗೆ ರೂ. 38.00 ಲಕ್ಷ ಅಂದಾಜು ಮಂಜೂರಾತಿ ಆಗಿರುತ್ತದೆ ಹಾಗೂ ಈ ಪ್ರಯೋಗಾಲಯಕ್ಕೆ ಅವಶ್ಯಕವಾದ ಸಲಕರಣೆಗಳನ್ನು ಒದಗಿಸಲೂ ಸಹ ಅವಕಾಶವಿರುತ್ತದೆ.

ಇ) ಆರ್.ಡಿ.ಎಲ್ ಕಾಮಗಾರಿಯನ್ನು ಟೆಂಡರ್ ಮೂಲಕ ಕೈಗೆತ್ತಿಕೊಂಡಿದ್ದು ಅತ್ಯಂತ ಕಡಿಮೆ ಟೆಂಡರ್ ದರ ಅಂದರೆ ರೂ. 29.75 ಲಕ್ಷ ನಮೂದಿಸಿದ ಮೆ: ಶ್ರೀ ಎನ್.ವಿ. ಸುಬ್ಬರಾವ್ ಅಂಡ್ ಸನ್ಸ್ ಗುತ್ತಿಗೆದಾರರಿಗೆ ಕೆಲಸ ವಹಿಸಲಾಗಿದೆ. ಈ ಕಾಮಗಾರಿ ಕೈಗೆತ್ತಿಕೊಂಡಿದ್ದು ಇದುವರೆಗೆ ರೂ. 22.12 ಲಕ್ಷ ವೆಚ್ಚವಾಗಿರುತ್ತದೆ. ಸದರಿ ಕಾಮಗಾರಿಯು ಎಲ್ಲಾ ಮುಖ್ಯ ಕಾಮಗಾರಿಗಳು ಮುಗಿಯುವ ಹಂತದಲ್ಲಿದೆ.

ಈ) ಕಟ್ಟಡ ಕಾಮಗಾರಿಯು ಮುಗಿಯುವ ಹಂತದಲ್ಲಿದ್ದು ಸೆಪ್ಟಂಬರ್ 2003ರ ಅಂತ್ಯಕ್ಕೆ ಪೂರ್ಣಗೊಳಿಸಿ ಉಪಕರಣಗಳನ್ನು ಸಹ ಸರಬರಾಜು ಮಾಡಿ ನಂತರ ಆರ್.ಡಿ.ಎಲ್. ಘಟಕವನ್ನು ಪ್ರಾರಂಭಿಸಲಾಗುವುದು.

ಸರ್ಕಾರಿ ಶಾಲೆಗಳಿಗೆ ಜಿಲ್ಲಾ ಪಂಚಾಯತ್‌ಗಳಿಂದ ಲಭ್ಯವಾಗುವ ಸೌಲಭ್ಯ ಹಾಗೂ ಆರ್ಥಿಕ ನೆರವು

4045 (4736) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಗರ ಪ್ರದೇಶದಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆಗಳಲ್ಲಿ ಸರ್ವಾಂಗೀಣ ಪ್ರಗತಿ ಮತ್ತು ಅಭಿವೃದ್ಧಿಗಾಗಿ ಜಿಲ್ಲಾ ಪಂಚಾಯತ್‌ನಿಂದ ದೊರಕುತ್ತಿರುವ ಸೌಲಭ್ಯ ಹಾಗೂ ಆರ್ಥಿಕ ಸಹಾಯಗಳ ವಿವರಗಳೇನು: